<u>ದಿಃ **23.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ.ಹೆಚ್.ಎಂ.ಬಿ ವಕೀಲರಿಂದಃ **4** ನೇ ಪ್ರತಿವಾದಿಯ ಪರವಾಗಿಃ</u>

**11)** ನಾನು 10 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಮ್ಮ ತಂದೆಗೆ ಮೂರು ಜನ ಹೆಣ್ಣುಮಕ್ಕಳು ಮತ್ತು ಮೂರು ಜನ ಗಂಡು ಮಕ್ಕಳು ಇರುತ್ತಾರೆ ಅಂದರೆ ಸರಿ, ಅದರಲ್ಲಿ ಕೆಲವರು ಮೃತಪಟ್ಟಿರುತ್ತಾರೆ. ಈ ಪ್ರಕರಣದಲ್ಲಿ ಮೃತಪಟ್ಟ ವ್ಯಕ್ತಿಗಳ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುವದಿಲ್ಲ, ಏಕೆಂದರೆ ಅದರ ಅವಶ್ಯಕತೆ ಕಂಡು ಬಂದಿರುವದಿಲ್ಲ. ನಾನು ಉದ್ದೇಶಪೂರ್ವಕವಾಗಿ ಮೃತಪಟ್ಟ ವ್ಯಕ್ತಿಗಳ ವಾರಸುದಾರರನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಅಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಚೆನ್ನವೀರಪ್ಪ ಅಂತಾ ಇರುತ್ತದೆ ಅಂದರೆ ಸರಿ.

**12)** ನನ್ನ ವಾದ ಪತ್ರದ ಪ್ಯಾರಾ ನಂಬರಃ 4 ರಲ್ಲಿ ಬರೆದಿರುವ ಎಲ್ಲ ಸಂಗತಿಗಳು ಸುಳ್ಳಾಗಿರುತ್ತವೆ ಅಂದರೆ ಸರಿಯಲ್ಲ. ನನ್ನ ತಂದೆಯಾದ ಚೆನ್ನವೀರಪ್ಪ ಮತ್ತು 1 ನೇ ಪ್ರತಿವಾದಿಯಾದಂತಹ ಮೃತ ಗಿರಿಜವ್ವ ಇವರ ವೈವಾಹಿಕ ಸಂಬಂದ ಸರಿ ಇರಲಿಲ್ಲ ಅಂದರೆ ಸರಿಯಲ್ಲ. ನಮ್ಮ ತಾಯಿ ಗಿರಿಜವ್ವ ಈಕೆ ತನ್ನ ಗಂಡನ ಮನೆಯನ್ನು ಬಿಟ್ಟು ಆಕೆಯ ತವರು ಮನೆಯಲ್ಲಿ ವಾಸಿಸುತ್ತಿದ್ದಳು ಅಂದರೆ ಸರಿಯಲ್ಲ. ನಮ್ಮ ತಂದೆ ಚೆನ್ನವೀರಪ್ಪ ಈತನು ಹುಬ್ಬಳ್ಳಿಯ ಕೌಟುಂಬಿಕ ನ್ಯಾಯಾಲಯದಿಂದ ನಮ್ಮ ತಾಯಿಯಾದ ಗಿರಿಜವ್ವ ಈಕೆಯನ್ನು ಪುನಃ ಮನೆಗೆ ಬಾಳ್ವೆ ಮಾಡಲು ಬರುವಂತೆ ಒಂದು ಪ್ರಕರಣ ದಾಖಲಿಸಿದ್ದ ಅಂದರೆ ಸರಿ. ಅದರ ಸಂಖ್ಯೆಃ 139/1961 ಆಗಿರುತ್ತದೆ ಅಂದರೆ ಸರಿ. ನಮ್ಮ ತಾಯಿಯಾದಂತಹ ಗಿರಿಜವ್ವ ಇವರು ತಮ್ಮ ತವರು ಮನೆಯವರು ಕೊಟ್ಟಂತಹ ಬೆಳ್ಳಿ ಮತ್ತು ಬಂಗಾರದ ಆಭರಣ ಮಾರಾಟ ಮಾಡಿ ದಾವಾ ಆಸ್ತಿಯನ್ನು ತಾನೇ ಸ್ವತಃ ಖರೀದಿ ಮಾಡಿದ್ದಾಳೆ ಅಂದರೆ ಸರಿಯಲ್ಲ.

**13)** ನಮ್ಮ ತಾಯಿಯಾದಂತಹ ಗಿರಿಜವ್ವ ಈಕೆ ತನ್ನ ಜೀವಿತ ಕಾಲದಲ್ಲಿ ದಾವಾ ಆಸ್ತಿಯಾದ ರಿ.ಸ.ನಂಬರಃ 5/4 ಒಟ್ಟು 14 ಎಕರೆ 5 ಗುಂಟೆ ಆಸ್ತಿಯನ್ನು ಒಬ್ಬ ಹುಸೇನಸಾಬ ಎನ್ನುವ ವ್ಯಕ್ತಿಯಿಂದ ಖರೀದಿಗೆ ಪಡೆದಿದ್ದಾಳೆ ಅಂದರೆ ಸರಿಯಲ್ಲ. ನನ್ನ ತಾಯಿಯಾದ ಗಿರಿಜವ್ವ ಈಕೆಯ ತಂದೆಯ ಹೆಸರು ನೀಲಪ್ಪ ಅಂತಾ ಇರುತ್ತದೆ. ನನ್ನ ತಾಯಿಯಾದಂತಹ ಗಿರಿಜವ್ವ ಈಕಜೆಯ ತಂದೆಯಾದಂತಹ ನೀಲಪ್ಪ ಇವರೂ ಹೆಚ್ಚಿಗೆ ಆಸಿತಗಳನ್ನು ಹೊಂದಿದ್ದು, ಅವರಿಗೆ ಯಾವುದೇ ರೀತಿ ಹಣಕಾಸಿನ ಅಡಚಣೆ ಇರಲಿಲ್ಲ ಅಂದರೆ ಸರಿಯಲ್ಲ. ನಮ್ಮ ಅಜ್ಜನಾದಂತಹ ನೀಲಪ್ಪ ಇವರು ಮನೆಯಲ್ಲಿದ್ದಂತಹ ಆಕಳುಗಳು ಮತ್ತು ಎಮ್ಮೆಗಳು ಎಲ್ಲವೂ ಹಿಂಡುತ್ತಿದ್ದವು ಅಂದರೆ ಸರಿ. ನಮ್ಮ ತಾಯಿಯಾದಂತಹ ಗಿರಿಜವ್ವ ಈಕೆ ತನ್ನ ತಂದೆಯ ಮನೆಯಲ್ಲಿದ್ದ ಆಕಳು ಮತ್ತ ಎಮ್ಮೆಗಳು ಹಿಂಡಿದಂತಹ ಹಾಲನ್ನು

ಮಾರಾಟ ಮಾಡಿ ದಾವಾ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡಿದ್ದಾಳೆ ಅಂದರೆ ಸರಿಯಲ್ಲ.

**14)** 4 ನೇ ಪ್ರತಿವಾದಿಯಾದಂತಹ ಉಮೇಶ ಗ‌ರ್ತನು ಈ ಪ್ರಕರಣದಲ್ಲಿ ರುವಂತಹ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಹಾವೇರಿಯ ಸಿವಿಲ್ ನ್ಯಾಯಾಲಯ ಮತ್ತು ಜ್ಯೂನಿಯರ್ ಡಿವಿಜನ್ ಮತ್ತು ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾನೆ ಅಂದರೆ ಸರಿಯಲ್ಲ. ಸದರಿ ಎರಡು ಪ್ರಕರಣಗಳ ಸಂಖ್ಯೆಃ ಒ.ಎಸ್ ನಂಬರಃ 455/2022 ಮತ್ತು ಒ.ಎಸ್ ನಂಬರಃ 8/2025 ಎಂದು ಎರಡು ಪ್ರಕರಣಗಳನ್ನು ದಾಖಲುಪಡಿಸಿರುತ್ತಾನೆ ಅಂದರೆ ಸರಿಯಲ್ಲ. ಎರಡೂ ಪ್ರಕರಣಗಳಲ್ಲಿ ನಾನು 1 ನೇ ಪ್ರತಿವಾದಿಯಾಗಿ ಹಾಜರಾಗಿರುತ್ತೇನೆ ಅಂದರೆ ಸರಿ. ನನ್ನ ಮಗನ ಹೆಸರು ಸೂರಜ್ ಅಂತಾ ಇರುತ್ತದೆ.

**15)** ದಾವಾ ಆಸ್ತಿಗಳಲ್ಲಿ ಒಂದು ಆಸ್ತಿಯನ್ನು ನಾವೇ ಸ್ವತಃ ನಮ್ಮ ಇಚ್ಛೆಯಿಂದ ನನ್ನ ಮಗನಾದ ಸೂರಜ್ ಇವನಿಗೆ ಹಕ್ಕುಬಿಟ್ಟು ಕೊಟ್ಟ ಪತ್ರದ ಮುಖಾಂತರ ವರ್ಗಾವಣೆ ಮಾಡಿರುತ್ತೇವೆ ಅಂದರೆ ಸರಿಯಲ್ಲ. 4 ನೇ ಪ್ರತಿವಾದಿ ಉಮೇಶ ಈತನೇ ನನ್ನ ತಾಯಿಯ ಗಿರಿಜವ್ವ ಈಕೆಯನ್ನು ನೋಡಿಕೊಂಡು ಆಕೆಯ ವೈದ್ಯಕೀಯ ಉಪಚಾರ ಕೊಡಿಸಿರುತ್ತಾನೆ ಅಂಕದರೆ ಸರಿಯಲ್ಲ, ನನ್ನ ತಾಯಿಯನ್ನು ನಾನೇ ನೋಡಿಕೊಂಡಿದ್ದೇನೆ. ನಮ್ಮ ತಾಯಿಯಾದಂತಹ ಗಿರಿಜವ್ವ ಈಕೆಗೆ 4 ನೇ ಪ್ರತಿವಾದಿ ಉಮೇಶ ಈತನು ಆರೈಕೆ ಮಾಡಿದ್ದರಿಂದ ದಾವಾ ಆಸ್ತಿಯಲ್ಲಿ ಒಂದು ಆಸ್ತಿಯಾದಂತಹ ರಿ.ಸ.ನಂಬರಃ 5/4 ಆಸ್ತಿಯನ್ನು ನಮ್ಮ ತಾಯಿ ಆತನ ಹೆಸರಿಗೆ ಹಕ್ಕುಬಿಟ್ಟು ಪತ್ರ ಮಾಡಿಕೊಟ್ಟಿದ್ದಾಳೆ ಅಂದರೆ ಸರಿಯಲ್ಲ.

**16)** ನನ್ನ ತಾಯಿಯ ಗಿರಿಜವ್ವ ಈಕೆಯ ಆರೈಕೆಯನ್ನು ನಾನು ಸರಿಯಾಗಿ ನೋಡಿಕೊಂಡಿಲ್ಲದೇ ಇದ್ದರೂ ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಅಸ್ತಿ ರಿ.ಸ.ನಂಬರಃ 188 ಈ ಅಸ್ತಿಯನ್ನು ನನ್ನ

ತಾಯಿಯಾದಂತಹ ಗಿರಿಜವ್ವ ಈಕೆ ತನ್ನ ಸ್ವಂತ ಖರ್ಚಿನಿಂದ ಖರೀದಿಗೆ ತೆಗೆದುಕೊಂಡಿದ್ದಾಳೆ ಅಂದರೆ ಸರಿಯಲ್ಲ. ನನ್ನ ತಾಯಿಯಾದಂತಹ ಗಿರಿಜವ್ವ ಈಕೆ ದಾವಾ ಆಸ್ತಿ ರಿ.ಸ.ನಂಬರಃ 188 02 ಎಕರೆ 25 ಗುಂಟೆಯಷ್ಟು ಆಸ್ತಿಯನ್ನು ತನ್ನ ಸ್ವಂತ ಗಳಿಕೆಯ ಮೇರೆಗೆ ಖರೀದಿ ತೆಗೆದುಕೊಂಡಿದ್ದಾಳೆ ಅಂದರೆ ಸರಿಯಲ್ಲ. ದಾವಾ ಆಸ್ತಿ 188 ಈ ಆಸ್ತಿಯನ್ನು ನಮ್ಮ ತಂದೆ ಸ್ವಂತ ಹಣದಿಂದ ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**17)** ನಮ್ಮ ತಂದೆಯು ಹಾವೇರಿಯ ಜೆ.ಹೆಚ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ನಮ್ಮ ತಂದೆಗೆ ಸದರಿ ಸರ್ಕಾರಿ ಕೆಲಸದಿಂದ ಎಷ್ಟು ವೇತನ ಬರುತ್ತಿತ್ತು ಎಂದು ನನಗೆ ಸ್ಪಷ್ಟವಾಗಿ ಹೇಳಲು ಬರುವದಿಲ್ಲ. ನಮ್ಮ ತಂದೆಯಾದಂತಹ ಚನ್ನವೀರಪ್ಪ ಈತನಿಗೆ ಯಾವುದೇ ಸ್ವಂತ ಆದಾಯ ಬರುತ್ತಿರಲಿಲ್ಲ, ನನ್ನ ತಾಯಿ ಗಿರಿಜವ್ವ ಈಕೆ ತನ್ನ ಸ್ವಂತ ಹಣದಿಂದ ದಾವಾ ಆಸ್ತಿಯನ್ನು ಖರೀದಿ ತೆಗೆದುಕೊಂಡಿರುತ್ತಾಳೆ ಅಂದರೆ ಸರಿಯಲ್ಲ. ನಮ್ಮ ತಾಯಿ ಗಿರಿಜವ್ವ ಈಕೆ 4 ನೇ ಪ್ರತಿವಾದಿಯಾದಂತಹ ಉಮೇಶ ಹಕ್ಕುಬಿಟ್ಟುಕೊಟಟಂತಹ ದಾಖಲಾತಿಯ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಸಿವಿಲ್ ದಾವೆಗಳನ್ನು ಹಾಕಿರುವದಿಲ್ಲ.

<u>ಪಾಟೀ ಸವಾಲುಃ ಮುಂದುವರೆದ ಪಾಟೀ ಸವಾಲಿಗೆ ಕಾಲಾವಾಕಶವನ್ನು ಕೇಳಲಾಗಿ, ಅವಕಾಶ ನೀಡಲಾಯಿತು.</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.